# GATWU
## Avery Dennison (India) Pvt. Ltd Branch

ಕಾರ್ಮಿಕ ಸಂಗಾತಿಗಳೇ,

ಏವರಿ ಡೆನಿಸನ್ ಕಂಪನಿಯ ಆಡಳಿತ ವರ್ಗಕ್ಕೆ ಮಾತ್ರ ಗೊತ್ತಿರುವ ಮಾಹಿತಿಗಳನ್ನು, ಕಾರ್ಮಿಕರ ಪರ ಯೂನಿಯನ್ ಎಂದು ಹೇಳಿಕೊಳ್ಳುವ CITU/ADWU ನ ಸದಸ್ಯ ಕಾರ್ಮಿಕರು ದಿನಾಂಕ 01.12.2018 ರಂದು ಸಹೋದ್ಯೋಗಿ ಕಾರ್ಮಿಕರಿಗೆ ವಾಟ್ಸ್‌ಅಪ್‌ನಲ್ಲಿ ಈ ಕೆಳಗಿನಂತೆ ಹಂಚಿಕೊಂಡಿದ್ದಾರೆ.

***"ಕಂಪನಿಯಲ್ಲಿ ರಿಜೆಕ್ಷನ್ ಆಗಿದೆ, ಕಂಪನಿಯು ತನ್ನ ಲಾಭದಲ್ಲಿ ಈ ನಷ್ಟ ಭರಿಸಬೇಕಾಗಿದೆ, ಕಂಪನಿಯು 140 ಕೋಟಿ ಸಾಲದಲ್ಲಿದೆ, ವರ್ಷಕ್ಕೆ 12 ಕೋಟಿ EMI ಕಟ್ಟುತ್ತಿದೆ, ಅದನ್ನೂ ಸಹ ಶೇರ್‌ಹೋಲ್ಡರ್ ಲಾಭಕೊಟ್ಟ ಮೇಲೆ, ಈ ವರ್ಷವೂ ಸಾಲ ತೆಗೆದುಕೊಳ್ಳಲು ಯೋಚಿಸಿತ್ತು, ಆದರೆ ಸಾಲ ಸಿಗುತ್ತಿಲ್ಲ, ಏಕೆಂದರೆ ಕಂಪನಿಯ ಅನಿಶ್ಚಿತ ಲಾಭ, ಕಾರ್ಮಿಕರ ಬಿರುಕು, ಡೊನಾಲ್ಡ್‌ಟ್ರಂಪ್‌ನ ಹೂಡಿಕೆ ಮೇಲಿನ ಕಠಿಣಕ್ರಮ, ಇವುಗಳಿಂದ ಕಂಪನಿಗೆ ಸಾಲ ಸಿಗುತ್ತಿಲ್ಲ, ಜೊತೆಗೆ ಕಂಪನಿಯ CIBIL Score ಕಡಿಮೆಯಾಗಿದೆ. . .. ... ."***

**ಸಂಗಾತಿಗಳೇ ಮತ್ತೊಮ್ಮೆ ಯೋಚಿಸಿ** ಮೇಲಿನ ಯಾವುದಾದರೂ ಹೇಳಿಕೆಯಲ್ಲಿ ಕಾರ್ಮಿಕರ ಹಿತಾಸಕ್ತಿ ಅಡಗಿದೆಯೇ? ಈ ಮಾತುಗಳು ಏವರಿ ಡೆನಿಸನ್ ಮ್ಯಾನೇಜ್‌ಮೆಂಟ್ ನವರು ಹೇಳಬೇಕಾಗಿರುವುದನ್ನು ತನ್ನ ಕೈಗೊಂಬೆಯಾಗಿರುವ ಈ CITU/ADWU ಮೂಲಕ ಹೇಳಿಸುತ್ತಿದೆ. ಇದರಿಂದಲೇ ಈ CITU/ADWU ಗಳು ಮ್ಯಾನೇಜ್‌ಮೆಂಟ್ ಆಡುವ ಮಾತುಗಳನ್ನು ಆಡುತ್ತಾ ಏವರಿ ಡೆನಿಸನ್ ಕಂಪನಿಯ ಅಡ್ವರ್‌ಟೈಸ್‌ಮೆಂಟ್ ಏಜೆನ್ಸಿಯ ರೀತಿಯಲ್ಲಿ ವರ್ತಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಪ್ರೊಡಕ್ಷನ್ ರಿಜೆಕ್ಟ್ ಆಗಿರುವುದಕ್ಕೆ ಕಾರ್ಮಿಕರು ಖಂಡಿತಾ ಕಾರಣರಲ್ಲ, ನಾವು ದಿನನಿತ್ಯ ಬೆವರು ಹರಿಸಿ ಅಡೆ ತಡೆಯಿಲ್ಲದೆ ಕೆಲಸ ಮಾಡುತ್ತಲೇ ಇದ್ದೇವೆ. ಒಂದೊಮ್ಮೆ ನಷ್ಟವಾಗಿದ್ದರೆ, ಅದಕ್ಕೆ ಮ್ಯಾನೇಜ್‌ಮೆಂಟ್ ವೈಫಲ್ಯವೇ ಕಾರಣ ಮತ್ತು ಲಾಭಗಳು ಎಲ್ಲ ಕಡೆ ಸೋರಿ ಹೋಗುತ್ತಿರಬಹುದಲ್ಲವೇ? ಉದಾಹರಣೆಗೆ ನಮ್ಮ ಕಂಪನಿಯಲ್ಲಿಯೇ ತಯಾರಿಸುವುದನ್ನು ಬಿಟ್ಟು, ಒಂದಕ್ಕೆರಡು ಪಟ್ಟು ಹೆಚ್ಚು ಹಣ ಕೊಟ್ಟು, ಏಕೆ ಔಟ್ ಸೋರ್ಸಿಂಗ್ ಮಾಡಿಸುತ್ತಿದ್ದಾರೆ? ಇದರಿಂದ ಕಂಪನಿಗೆ ನಷ್ಟವಲ್ಲವೇ? ಕಂಪನಿಯ ಸ್ವಂತ ಕಟ್ಟಡ ಖಾಲಿಯಿದ್ದರೂ ಸಹ, ಬೇರೆ ಕಟ್ಟಡಕ್ಕೆ ತಿಂಗಳಿಗೆ ಲಕ್ಷಾಂತರ ರೂ. ಬಾಡಿಗೆ ಕಟ್ಟುತ್ತಿರುವುದು ಕಂಪನಿಗೆ ನಷ್ಟವಲ್ಲವೇ? GATWU ಈ ಹಿಂದೆ ಅಂಕಿಅಂಶಗಳ ಸಮೇತ ಕಂಪನಿಯ ಲಾಭದ ಪ್ರಮಾಣವನ್ನು ತಮಗೆ ತಿಳಿಸಿತ್ತು. **(2014-15 ರಲ್ಲಿ ತೆರಿಗೆಯ ಪೂರ್ವ ಲಾಭ 23 ಕೋಟಿ 65 ಲಕ್ಷ ರೂ., 2015-16 ರಲ್ಲಿ 48 ಕೋಟಿ 14 ಲಕ್ಷ 25 ಸಾವಿರ ರೂ., 2016-17 ರಲ್ಲಿ 79 ಕೋಟಿ 32 ಲಕ್ಷ ಒಂಬತ್ತು ಸಾವಿರ ರೂ ಲಾಭಗಳಿಸುತ್ತಾ, ಸತತವಾಗಿ ಲಾಭದಾಯಕವಾಗಿ ಮುನ್ನಡೆದಿದೆ).**

ವರ್ಷಕ್ಕೆ ಸಾವಿರಾರು ಕೋಟಿ ವ್ಯವಹಾರ ಮಾಡುವ ಕಂಪನಿಯು ಸಾಲ ಮಾಡುವುದು ಸಹಜ, ತೀರಿಸಿಕೊಳ್ಳುವುದೂ ಸಹಜ, ಅದಕ್ಕಾಗಿಯೇ ಕೋಟ್ಯಂತರ ರೂ ಖರ್ಚು ಮಾಡಿ ಫೈನಾನ್ಸ್ ಮ್ಯಾನೇಜ್‌ಮೆಂಟ್ ಎಂಬ ವಿಭಾಗವನ್ನೇ ಹೊಂದಿರುತ್ತದೆ.

ಕಾರ್ಮಿಕರ ಪ್ರತಿನಿಧಿಗಳಾಗಿರುವ ಯೂನಿಯನ್‌ಗಳು, ತಮ್ಮ ಕಾರ್ಮಿಕರು ಜೀವನ ಸಾಗಿಸಲು ಎಷ್ಟು ಸಾಲ ಮಾಡುತ್ತಿದ್ದಾರೆ, ಅವರ ಜೀವನ ಮಟ್ಟ ಹೇಗೆ ಕುಸಿಯುತ್ತಿದೆ, ಎಂಬುದನ್ನು ಚಿಂತಿಸಬೇಕಾಗಿತ್ತು.

Scanned with OKEN Scanner

ಆರು ವರ್ಷದಿಂದ ಸತತವಾಗಿ ಕೊಡುತ್ತಿದ್ದ OT ಯನ್ನು ಇತ್ತೀಚಿಗೆ ಇದ್ದಕ್ಕಿದ್ದಂತೆ ಮ್ಯಾನೇಜ್‌ಮೆಂಟ್ ನಿಲ್ಲಿಸಿದ್ದರಿಂದ, ತಿಂಗಳಿಗೆ 3000 ರಿಂದ 4000 ರೂ. ಕಾರ್ಮಿಕರಿಗೆ ಆದಾಯ ಕಡಿಮೆಯಾಯಿತು. ಇದನ್ನು ಸರಿದೂಗಿಸಲು ಎಲ್ಲಾ ಕಾರ್ಮಿಕರು ಕಷ್ಟಪಡುತ್ತಿದ್ದಾರೆ, ಇದರ ಬಗ್ಗೆ ಈ ಯೂನಿಯನ್‌ಗೆ ಗಮನವೇ ಇಲ್ಲ, ಬದಲಿಗೆ "ಕಂಪನಿಯು ಇಷ್ಟು EMI ಕಟ್ಟುತ್ತಿದೆ, CIBIL Score ಕಡಿಮೆಯಾಗಿರುವುದರಿಂದ ಸಾಲ ಸಿಗುತ್ತಿಲ್ಲ" ಎಂದು ಮ್ಯಾನೇಜ್‌ಮೆಂಟ್ ಪರವಾಗಿ ಮಾತನಾಡುತ್ತಿದ್ದಾರೆ.

ಏವರಿ ಡೆನಿಸನ್ ಕಂಪನಿಯಲ್ಲಿ 10 ವರ್ಷದಿಂದ ಕೆಲಸ ಮಾಡುತ್ತಿರುವ ಕೆಲವು ಕಾರ್ಮಿಕರು ಇಂದಿಗೂ ಕೇವಲ ರೂ 15000 ದಿಂದ 20000 ವೇತನ ತೆಗೆದುಕೊಳ್ಳುತ್ತಿದ್ದಾರೆ, ದಿನದಿಂದ ದಿನಕ್ಕೆ ಬೆಲೆಗಳು ಏರಿಕೆಯಾಗುತ್ತಿದ್ದು, ಕಾರ್ಮಿಕರ ಜೀವನ ಮಟ್ಟ ಕುಸಿಯುತ್ತಲೇ ಇದೆ. ಕಳೆದ ವೇತನ ಒಪ್ಪಂದದಲ್ಲಿ ವೈಯಕ್ತಿಕ OIP ಯನ್ನು ಒಪ್ಪಿಕೊಳ್ಳುವ ಮೂಲಕ ಕಾರ್ಮಿಕರಿಗೆ ಅನ್ಯಾಯವೆಸಗಿದ್ದ ಈ CITU/ADWU ಗಳು ಡೊನಾಲ್ಡ್‌ಟ್ರಂಪ್‌ನ ಆರ್ಥಿಕ ನೀತಿಯ ಬಗ್ಗೆ ಚಿಂತೆ ಮಾಡುತ್ತಾ ಕಾರ್ಮಿಕರಿಗೆ ಯಾವ ಸಂದೇಶ ಕೊಡುತ್ತಿದ್ದಾರೆ? ಈ ರೀತಿ ಸುದ್ದಿ ಹಬ್ಬಿಸುತ್ತ ಕಾರ್ಮಿಕರ ಮನೋಸ್ಥೈರ್ಯವನ್ನು ಉಡುಗಿಸಲು ಹೊರಟಿದ್ದಾರೆಯೇ?

GATWU ಕಾರ್ಮಿಕರಿಗೆ ಎಂದಿಗೂ 70 ಸಾವಿರ 80 ಸಾವಿರ ವೇತನ ಕೊಡಿಸುತ್ತೇವೆಂದು ಭರವಸೆಯನ್ನು ಕೊಟ್ಟಿಲ್ಲ. GATWU ಏನೇ ಆಗ್ರಹಿಸಿದರೂ ಗಾಳಿಯಲ್ಲಿ ಲೆಕ್ಕ ಹಾಕಿ ಅಂಕಿಅಂಶಗಳನ್ನು ಕೇಳುವುದಿಲ್ಲ, ಎಲ್ಲದಕ್ಕೂ ದಾಖಲೆ ಇಟ್ಟುಕೊಂಡು ಮಾತನಾಡುತ್ತದೆ. ಅದರ ಹಿಂದೆ ವೈಜ್ಞಾನಿಕವಾದ ಲೆಕ್ಕಾಚಾರ ಇರುತ್ತದೆ. ನಾವು ಮ್ಯಾನೇಜ್‌ಮೆಂಟ್ ಮುಂದೆ ಭಿಕ್ಷಾ ಪಾತ್ರೆ ಹಿಡಿದು ನಮಗೆ ಕೊಡಿ ಎಂದು ಬೇಡುವುದಿಲ್ಲ, ನಮಗೆ ಏನು ಬೇಕು ಎಂಬುದನ್ನು ಅಂಕಿಅಂಶಗಳ ದಾಖಲೆ ಸಮೇತ ನ್ಯಾಯವಾಗಿ, ಗಟ್ಟಿಯಾಗಿ ಕೇಳುತ್ತೇವೆ.

**CITU/ADWU ನಲ್ಲಿ ಇರುವ ನಮ್ಮ ಅಣ್ಣ-ತಮ್ಮಂದಿರು ನಿಧಾನವಾಗಿ ಒಮ್ಮೆ ತಮ್ಮ ಆತ್ಮಸಾಕ್ಷಿಯಿಂದ ಯೋಚಿಸಿ, ಮೊನ್ನೆ ನಡೆದ ನಿಮ್ಮ ಗೇಟ್ ಮೀಟಿಂಗ್ ಬಗ್ಗೆ ನೀವೇ ಆತ್ಮಾವಲೋಕನ ಮಾಡಿಕೊಳ್ಳಿ, ಸುಳ್ಳಿನ ಅಣೆಕಟ್ಟು ಕಟ್ಟಿ ಎಷ್ಟು ದಿನ ನೀರು ನಿಲ್ಲಿಸಲು ಸಾಧ್ಯ? ಕಾರ್ಮಿಕರ ಹಿತಾಸಕ್ತಿ ಕಾಯುತ್ತಿರುವ ಯೂನಿಯನ್ ಯಾವುದು? ಮ್ಯಾನೇಜ್‌ಮೆಂಟ್ ಹಿತಾಸಕ್ತಿ ಕಾಯುವ ಯೂನಿಯನ್ ಯಾವುದು? ಎಂದು ನೀವೇ ಯೋಚಿಸಿ ನಿರ್ಧರಿಸಿ, GATWU ವಿನೊಂದಿಗೆ ಸೇರಿಕೊಳ್ಳಿ, ಒಂದು ಕಂಪನಿ, ಒಂದು ಯೂನಿಯನ್ ಮತ್ತು ಒಂದು ಚಾರ್ಟರ್ ಆಫ್ ಡಿಮಾಂಡ್ ಇರಲಿ_.**

**ಕಾರ್ಮಿಕರ ಐಕ್ಯತೆಯಲ್ಲಿ ಬಲವಿದೆ. . . . . .ಒಗ್ಗಟ್ಟಿನಲ್ಲಿ ಶಕ್ತಿಯಿದೆ. . . . .**

ಪದಾಧಿಕಾರಿಗಳು
GATWU-Avery Dennison India Pvt. Ltd Branch

ನಂ.17/1, 1ನೇ ಮಹಡಿ, ಹೊಸ ಗುಡ್ಡದಹಳ್ಳಿ, ಬಾಲಾಜಿ ಕಲ್ಯಾಣ ಮಂಟಪದ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು-560026

Scanned with OKEN Scanner